

ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

ನಾನೊಬ್ಬ ಪ್ರೌಢಶಾಲೆ ಶಿಕ್ಷಕ. 15 ವರ್ಷಗಳಿಂದ ಸೇವೆಯಲ್ಲಿರುವ ನನಗೆ ಪ್ರೌಢಶಾಲೆಗೆ ಬರುವ ವಿದ್ಯಾರ್ಥಿಗಳ ಮಾನಸಿಕ ಮತ್ತು ಶಾರೀರಿಕ ಬದಲಾವಣೆಗಳು ಅಚ್ಚರಿಯನ್ನು ಉಂಟುಮಾಡಿಸದೇ ಇಲ್ಲ. ಈವರೆವಿಗೂ ಸಾವಿರಾರು ವಿದ್ಯಾರ್ಥಿಗಳನ್ನು ಶಾಲೆಯ ಆವರಣದಲ್ಲಿ ಕಂಡಿದೀನಿ. ನೂರಾರು ಮಕ್ಕಳಿಗೆ ಪಾಠ, ತಿಳಿವಳಿಕೆ ಬೋಧಿಸಿದ್ದೇನೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ನಮ್ಮ ವಿದ್ಯಾರ್ಥಿಗಳ ನಡೆನುಡಿಗಳಲ್ಲಿ ಆಗುತ್ತಿರುವ ಬದಲಾವಣೆ, ವ್ಯತ್ಯಾಸಗಳು ವಿಶೇಷವೆನಿಸುತ್ತದೆ. ಅಂದರೆ, ಮೊಬೈಲು ಮತ್ತು ಟಿವಿಯನ್ನು ಸಣ್ಣ ವಯಸ್ಸಿನಿಂದಲೇ ಪರಿಚಯಿಸಿಕೊಂಡಿರುವ ಮಕ್ಕಳು, ಇವುಗಳ ಪರಿಚಯವಿರದಿರುವ ಮಕ್ಕಳಿಗಿಂತ ಭಿನ್ನವಾಗಿರುವುದು ಕಾಣಿಸುತ್ತದೆ. ಇಂತಹ ಮಕ್ಕಳಲ್ಲಿ ಅನೇಕರು ತುಂಬಾ ಚುರುಕಿರುತ್ತಾರೆ. ಹಾಗೆಯೇ ಕೆಲವರಲ್ಲಿ ಅತಿ ಚಡಪಡಿಕೆ, ಅಸಹಾಯಕತೆ ಮತ್ತು ಅಸಹನೆ ಇರುವುದು ಹೆಚ್ಚಾಗಿಯೇ ಇರುವಂತೆ ಕಾಣಿಸುತ್ತದೆ. ಈ ಮಕ್ಕಳು ಕಲಿಯುವ ವಿಧಾನ, ಇತರ ಮಕ್ಕಳೊಂದಿಗೆ ಬೆರೆಯುವ ಮಾದರಿ ಹಾಗೂ ಪರೀಕ್ಷೆಯನ್ನು ಎದುರಿಸುವ ಕ್ರಮದಲ್ಲಿಯೂ ತುಂಬಾ ಭಿನ್ನತೆ ಇರುವುದು ಸ್ಪಷ್ಟ. ಹೀಗೆ ವಿಭಿನ್ನ ಮಾನಸಿಕತೆ ಇರುವ ಮಕ್ಕಳಿಗೆ ತಿಳಿವಳಿಕೆ ನೀಡುವುದು ಮತ್ತು ಕಲಿಸುವುದು ಒಂದು ರೀತಿಯಲ್ಲಿ ತ್ರಾಸವೆನಿಸುತ್ತದೆ. ತ್ರಾಸ ಎನ್ನುವುದು ಬೇಸರ ಅಥವಾ ಅದಕ್ಷತೆಯಿಂದ ಹುಟ್ಟಿಕೊಂಡಿರುವುದಲ್ಲ. ನಮ್ಮ ಮನಸ್ಸು ಮತ್ತು ಬೋಧಿಸುವ ಕ್ರಮಗಳು ಹಳೆಯದ್ದು. ನಮ್ಮ ಕಣ್ಣೆದುರಿಗೆ ಬರುವ ಮಕ್ಕಳು ಹೊಚ್ಚ ಹೊಸತನವನ್ನು ಹೊಂದಿರುವಂತಹವರು. ಅಂದರೆ ತಂತ್ರಜ್ಞಾನದ ಮೂಲಕ ಮಾಹಿತಿಗಳನ್ನು ಪಡೆದಿರುವಂತಹವರು. ಇಂತಹ ಮಕ್ಕಳ ಮನಸ್ಥಿತಿಯನ್ನು ಅರ್ಥಮಾಡಿಕೊಂಡು ಬೋಧಿಸುವುದು, ತಪ್ಪು ಮಾಡಿದಾಗ ಶಿಕ್ಷೆ ನೀಡುವ ವಿಧಾನಗಳಲ್ಲೂ ಹೊಸ ದೃಷ್ಟಿಕೋನದ ಅಗತ್ಯವಿದೆ. ಇಂತಹದೊಂದು ತಿಳಿವಳಿಕೆ ಅನೇಕರಲ್ಲಿ ಇಲ್ಲ. ಜೊತೆಗೆ ಮಕ್ಕಳ ನಡುವೆ ಕಂಡು ಬರುವ ಮಾನಸಿಕ ವ್ಯತ್ಯಾಸದ ಕಾರಣವನ್ನು ಗುರುತಿಸುವುದು ಬಹಳ ಮುಖ್ಯವೆನಿಸುತ್ತದೆ. ಶಾಲೆಗೆ ಬರುವ ಮಕ್ಕಳ ಮಾನಸಿಕತೆ ಮತ್ತು ಅದನ್ನು ಪರಿಹರಿಸುವುದಕ್ಕೆ ಬೇಕಾದ ಮಾರ್ಗದರ್ಶನ ಮಾಡಿ.

–ಹಣಮಂತ ಪಾಟೀಲ, ಹುಬ್ಬಳ್ಳಿ

ನಿಮ್ಮ ಅನಿಸಿಕೆ ನಿಜವಿರಬಹುದು. ಮಕ್ಕಳ ಮನಸ್ಸನ್ನು ಹೊಸ ತಂತ್ರಜ್ಞಾನ ಸರಳವಾಗಿ ಆಕರ್ಷಿಸಬಲ್ಲದ್ದಾಗಿದೆ. ಕುತೂಹಲವನ್ನು ಕೆರಳಿಸಬಲ್ಲ ಈ ತಂತ್ರಜ್ಞಾನವು ಬಹಳ ಸುಲಭವಾಗಿಯೂ ಲಭ್ಯ. ಹೀಗಾಗಿ ವಿಕಾಸಗೊಳ್ಳುತ್ತಿರುವ ಮಕ್ಕಳ ಮಾನಸಿಕ ಶಕ್ತಿಗಳಿಗೆ ಇದು ಪೂರಕವಾಗಿದೆ. ಹೊಸ ತಂತ್ರಜ್ಞಾನ ಮಕ್ಕಳ ಕಲಿಕೆಯ ಮೇಲೂ ಪರಿಣಾಮ ಬೀರುವಂತಹದ್ದು. ಅಂದರೆ, ದೃಶ್ಯಾವಳಿಗಳ ಮೂಲಕ ವಿವರಣೆಗಳು ಬಹಳ ಸುಲಭವಾಗಿ ಗ್ರಹಿಸಬಹುದು. ಶಾಲಾ ಕಲಿಕೆ ಮತ್ತು ಬೋಧನೆಯ ಕ್ರಮಗಳಿಗೂ ಈ ಮಾದರಿಯ ಗ್ರಹಿಕೆಯ ಕ್ರಮಕ್ಕೂ ಸಂಘರ್ಷವಾಗುವುದು ಸಹಜವೇ. ಹೆಚ್ಚಿನ ಸಮಯದಲ್ಲಿ ಶಿಕ್ಷಕರ ಮಾತುಗಳ ಮೂಲಕವೇ ಬೋಧನೆಯ ಕ್ರಮ ನೆರವೇರುತ್ತದೆ. ಮಕ್ಕಳ ಏಕಾಗ್ರತೆ ಇಲ್ಲಿ ಹೆಚ್ಚಿನ ಹೊತ್ತು ಇರಲಾರದು. ಅದೇ, ಟಿವಿ ಮೂಲಕವೋ, ಮೊಬೈಲ್ ಮೂಲಕವೂ ಸಿಗುವ ಚಿತ್ರಗಳು ನೇರವಾಗಿ ವ್ಯಕ್ತಿಯ ಕಣ್ಣು ಮತ್ತು ಮನಸ್ಸನ್ನು ಗಾಢವಾಗಿಯೇ ಆಕರ್ಷಿಸುತ್ತದೆ, ಪರಿಣಾಮವೂ ಬೀರುತ್ತದೆ.

ಹಾಗೆಂದ ಮಾತ್ರಕ್ಕೆ ಹೊಸ ತಂತ್ರಜ್ಞಾನಗಳು ಶಿಕ್ಷಕರ ಸ್ಥಾನವನ್ನು ಪಡೆಯಬಲ್ಲದು ಅಥವಾ ಬದಲಾಯಿಸಿ ಬಿಡುವುದು ಎಂದಲ್ಲ. ಮಕ್ಕಳು ಇಂತಹದೊಂದು ತಂತ್ರಜ್ಞಾನದ ಮೂಲಕ ಪಡೆದುಕೊಂಡ ಗ್ರಹಿಕೆಯ ರೀತಿಯು ಬೋಧನೆಯ ಮೂಲಕ ನೆರವೇರುವ ಕಲಿಕೆಗೆ ವಿರುದ್ಧವಾಗಿಯೇ ಇರಬಲ್ಲದು. ಹೀಗಾಗಿ ಕಲಿಯುವುದರ ಬಗ್ಗೆ ಆಸಕ್ತಿ ಕಡಿಮೆಯಾಗಬಹುದು, ಅವಸರದ ಕಲಿಕೆಯ ಕ್ರಮಗಳು ಹೆಚ್ಚಬಹುದು ಅಥವಾ ಕಲಿಕೆಯ ಬಗ್ಗೆ ಉದಾಸೀನ ಬರಬಹುದು. ಇವೆಲ್ಲವನ್ನು ಮೀರಿಸುವ ಗುಣ ಉತ್ತಮ ಶಿಕ್ಷಕರಲ್ಲಿ ಇರುತ್ತದೆ ಎನ್ನುವ ಬಗ್ಗೆ ಸಂದೇಹ ಇಲ್ಲ. ಏಕೆಂದರೆ, ತಂತ್ರಜ್ಞಾನದ ಮಾಹಿತಿ ಮತ್ತು ಕ್ರಮವು ಆಕರ್ಷಣೀಯ ಮತ್ತು ಸರಳವೇ ಆಗಿದ್ದರೂ ಅದು ಏಕ ಮುಖಿಯಾಗಿರುವ ಸಾಧ್ಯತೆಗಳೇ ಹೆಚ್ಚು. ವ್ಯಕ್ತಿ ವ್ಯಕ್ತಿಗಳ ನಡುವೆ ಉಂಟಾಗುವ ಮಾನವ ಸಂಬಂಧ ಇಂತಹ ಕಲಿಕೆಯಲ್ಲಿ ಇರದಿರುವುದರಿಂದ, ಸಹಜವಾಗಿ ಮೂಡಿಬರುವ ಭಾವನಾತ್ಮಕ ಸಂಬಂಧಗಳು, ಸೂಕ್ಷ್ಮ ಸಂವೇದನೆಗಳು ಇರದ ಗ್ರಹಿಕೆ/ ಕಲಿಕೆಯ ಕ್ರಮವನ್ನು ಮಕ್ಕಳು ಇಷ್ಟಪಡದಿರುವ ಸಾಧ್ಯತೆಗಳು ಇವೆ. ಆದುದರಿಂದ ಉತ್ತಮ ಶಿಕ್ಷಕನು ಮಕ್ಕಳ ಮನಸ್ಸಿಗೆ ಹೆಚ್ಚು ಗಮನಕೊಡುವುದು ಬಹಳ ಮುಖ್ಯ. ವಿಷಯ ಬೋಧನೆಯಲ್ಲಿಯೂ ಸಹ ಮಾನವೀಯ ಗುಣಗಳನ್ನು ಅಳವಡಿಸಿಕೊಂಡೇ ಕಲಿಕೆಯನ್ನು ಮುಂದುವರೆಸಬೇಕು.

ಇತ್ತೀಚಿನ ದಿನಗಳಲ್ಲಿ ಇಂತಹ ಬೋಧಕರ ಕೊರತೆ ಇದೆ ಎನ್ನಬಹುದು. ಎಷ್ಟೋ ಸಲ ಬೋಧಕರ ನಡೆ– ನುಡಿಗಳೇ ಮಕ್ಕಳ ಮನಸ್ಸಿನಲ್ಲಿ ಕಲಿಕೆಯ ಬಗ್ಗೆ ನಿರಾಸಕ್ತಿಯನ್ನೋ, ಹೇವರಿಕೆಯನ್ನೋ ಉಂಟುಮಾಡಬಲ್ಲದು. ಇದೆಲ್ಲದರ ಜೊತೆಗೆ ಕೆಲವು ಮಕ್ಕಳಲ್ಲಿ ಮಾನಸಿಕ ಸಮಸ್ಯೆಗಳು ಇರುವ ಸಾಧ್ಯತೆಗಳಿವೆ. ಓದುವ ಸಮಸ್ಯೆ, ಅಕ್ಷರಗಳನ್ನು ಗುರುತಿಸಲಾಗದಿರುವುದು, ಗಣಿತದ ಕಲಿಕೆಗೆ ಸಂಬಂಧಪಟ್ಟ ಸಮಸ್ಯೆ, ಬರವಣಿಗೆಯ ಸಮಸ್ಯೆ, ನೆನಪಿನ ಸಮಸ್ಯೆ, ಅತಿಯಾದ ಚಡಪಡಿಕೆ, ಗಮನವಿರಿಸಿಕೊಳ್ಳಲಾರದ ಸಮಸ್ಯೆ , ಅತಿಯೆನಿಸುವ ತುಂಟಾಟ ಅಥವಾ ಕೋಪದ ವರ್ತನೆಗಳು ಶಾಲೆಯ ಆವರಣದಲ್ಲೇ ವ್ಯಕ್ತಗೊಳ್ಳಬಲ್ಲದು.

ಇಂತಹ ಸಮಸ್ಯೆಗಳು ಸಾಧ್ಯವಿದೆ ಎನ್ನುವುದು ಅದೆಷ್ಟೋ ಪೋಷಕರಿಗೆ, ಶಿಕ್ಷಕರಿಗೆ ಗೊತ್ತಿರುವುದಿಲ್ಲ. ಅತಿ ಚಂಚಲ ಮನಸ್ಸಿನ ಮಕ್ಕಳು, ಚಡಪಡಿಸುವ ಮಕ್ಕಳು, ಏಕಾಂಗಿಯಾಗಿರಬೇಕೆಂಬ ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳದ ಪೋಷಕರು, ಶಿಕ್ಷಕರು ಎಲ್ಲಾ ಮಕ್ಕಳೂ ಒಂದೇ ರೀತಿಯಲ್ಲಿ ಸಾಮರ್ಥ್ಯವನ್ನು ಹೊಂದಿರುತ್ತಾರೆ ಎನ್ನುವುದಾಗಿ ತಿಳಿದುಕೊಂಡಿರುವುದು ಸಹಜ. ಆದರೆ ಹೀಗಿರದಿರುವ ಸಾಧ್ಯತೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿವೆ. ಇದಕ್ಕೆ ಹೊಸ ತಂತ್ರಜ್ಞಾನವೇ ಕಾರಣವೆಂದು ಹೇಳಲಾಗದು, ಜೊತೆಯಲ್ಲಿ ಶಾಲೆಯ ಶಿಕ್ಷಣದ ರೀತಿಯೇ ಕಾರಣವೆಂದೂ ಆರೋಪಿಸುವುದು ಸರಿಯಲ್ಲ. ಮಕ್ಕಳ ಮಾನಸಿಕ ಸಮಸ್ಯೆಗಳಿಗೆ ಕಾರಣವೇನೇ ಇದ್ದರೂ ಶಾಲೆಯ ಆವರಣವು ಅದನ್ನು ಹೆಚ್ಚಿಸುವಂತಹ ಸನ್ನಿವೇಶಗಳನ್ನು ಸೃಷ್ಟಿಸಬಾರದು. ಸಹಪಾಠಿಗಳಲ್ಲಿ, ಸಮವಯಸ್ಕರಲ್ಲಿ ಮತ್ತು ಶಿಕ್ಷಕರಲ್ಲಿ ಮಾನಸಿಕ ಸಮಸ್ಯೆಗಳಿರುವ ಮಕ್ಕಳನ್ನು ಅರ್ಥಮಾಡಿಕೊಳ್ಳುವ ಕ್ರಮ ಜಾರಿಗೆ ಬರಬೇಕಾಗಿದೆ.

ಶಿಕ್ಷಕರು ಮಕ್ಕಳ ನಡೆನುಡಿಗಳನ್ನು ಎಚ್ಚರಿಕೆಯಿಂದಲೇ ಗಮನಿಸಬೇಕಾಗುತ್ತದೆ. ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡದ ವಿದ್ಯಾರ್ಥಿಯನ್ನು ದಡ್ಡನೆಂದೋ, ಸೋಮಾರಿ ಎಂದೋ ಹಂಗಿಸುವುದು ವಾಡಿಕೆ. ಆದರೆ, ಒಂದು ವಿಧದ ಮಾನಸಿಕ ಸಮಸ್ಯೆಗಳಿರುವ ಮಕ್ಕಳು ಉತ್ತರ ತಿಳಿದಿದ್ದರೂ ಹೇಳುವುದಕ್ಕೆ ಬೇಕಾದಂತಹ ಒಳಪ್ರೇರಣೆ ಇರದಿರಬಹುದು. ಇದು ದಾಕ್ಷಿಣ್ಯ ಅಥವಾ ನಾಚಿಕೆಯಿಂದ ಹುಟ್ಟಿರುವಂತಹ ಲಕ್ಷಣ ಆಗದಿರಬಹುದು. ಇವು ಹಿಂದೆ ಹಸುಳೆತನದಿಂದಲೇ ಮೂಡಿದ ಆತಂಕ, ಅಂಜಿಕೆಗಳು ಇರಬಹುದು. ಅಂದರೆ, ಸಾಮಾಜಿಕ ವರ್ತನೆಗಳು ಕಲಿಯುವುದಕ್ಕೂ ಮುಂಚಿತವಾಗಿಯೇ ಇರುವುಂತಹದ್ದು. ಆದರೂ ಬುದ್ಧಿಶಕ್ತಿ, ನೆನಪಿನ ಶಕ್ತಿ ಉತ್ತಮವಾಗಿಯೇ ಇರಬಲ್ಲದು. ಇಂತಹ ಮಕ್ಕಳ ಬಗ್ಗೆ ಶಿಕ್ಷಕರು ತೋರಿಸುವ ಒರಟುತನ ಸಮಸ್ಯೆಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅದೇ ರೀತಿಯಲ್ಲಿ ಕೆಲವು ಮಕ್ಕಳಿಗೆ ಓದುವ ಸಾಮರ್ಥ್ಯ ಇರುವುದಿಲ್ಲ. ಕೆಲವು ಅಕ್ಷರಗಳನ್ನು ಜೋಡಿಸಿ ಹೇಳುವುದು ಕಷ್ಟ. ಇನ್ನು ಕೆಲ ಮಕ್ಕಳಿಗೆ ಬರವಣಿಗೆ ಕಷ್ಟ. ಅಕ್ಷರಗಳನ್ನು ಸರಿಯಾಗಿ ಗುರುತಿಸಲಾರರು. ಆದರೆ, ಬಾಯಿಪಾಠದಲ್ಲಿ ನಿಸ್ಸೀಮರು. ಹೀಗೆ ಎಲ್ಲಾ ಮಕ್ಕಳ ಮಾನಸಿಕ ಶಕ್ತಿ ಮತ್ತು ಕಲಿಕೆ, ಸ್ಮೃತಿಯ ರೀತಿ ಸಮನಾಗಿ ಇರುವುದಿಲ್ಲ.

ಕೆಲ ಮಕ್ಕಳು ಕಲಿಯುವ ಸಾಮರ್ಥ್ಯವಿದ್ದರೂ ಶಿಕ್ಷಕರು ಮತ್ತು ಸಹಪಾಠಿಗಳ ಅಪಹಾಸ್ಯಕೆ ಗುರಿಯಾಗಿ ಮತ್ತಷ್ಟು ತೊಂದರೆ ಅನುಭವಿಸುತ್ತಾರೆ. ಶಿಕ್ಷಕರು ಮತ್ತು ಪೋಷಕರು ಈ ವಿಷಯದತ್ತ ಗಮನಿಸಬೇಕು. ಶಿಕ್ಷಕರಾಗಿ ನೀವು ಮಕ್ಕಳ ಕಲಿಯುವ ಸಾಮರ್ಥ್ಯವನ್ನು ಗುರುತಿಸುವುದು ಬಹಳ ಮುಖ್ಯ. ಜತೆಯಲಿ ಹೋಲಿಕೆ ಮಾಡುವಾಗ ಎಚ್ಚರವಿರಬೇಕು. ಯಾವುದೇ ವಿದ್ಯಾರ್ಥಿಯ ಸಾಮರ್ಥ್ಯ/ ವರ್ತನೆಗಳ ಬಗ್ಗೆ ಅವಸರದ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸರಿಯಲ್ಲ. ಕಲಿಯದ ಮಕ್ಕಳಿಗೆ ಶಿಕ್ಷೆ ಕೊಡುವುದು ಅತ್ಯಂತ ಅನಾಗರೀಕ ಪದ್ಧತಿ. ಶಿಕ್ಷಕನಿಗೆ ಇರಬೇಕಾದ ಮೊದಲ ಗುಣ ತಾಳ್ಮೆ. ಮಕ್ಕಳಿಗೆ ಸ್ಪಂದಿಸುವ ಗುಣ ಎರಡನೆಯದು. ಇವುಗಳನ್ನು ರೂಢಿಸಿಕೊಂಡರೆ ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳಬಹುದು.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ:** ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122